ಪಂಚಾಯತ್ ರಾಜ್ ವ್ಯವಸ್ಥೆ

1415(2322), ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ರಾಜ್ಯದಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಯಾವಾಗಿನಿಂದ ಜಾರಿಗೊಳಿಸಲಾಯಿತು; ಇದನ್ನು ಜಾರಿಗೆ ತರಲು ರಚಿಸಿದ ಮಾನದಂಡಗಳೇನು;

ಆ) ಇತ್ತೀಚೆಗೆ ಈ ಪಂಚಾಯತಿಗಳ ಸರಹದ್ದು ವ್ಯಾಪ್ತಿ ವಿಸ್ತೀರ್ಣವು ವಿಸ್ತಾರಗೊಳ್ಳುತ್ತಿರುವುದರಿಂದ ಸದರಿ ಪಂಚಾಯತಿಗಳನ್ನು ಪುನರ್ ವಿಂಗಡಣೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗಿದ್ದಲ್ಲಿ, ಯಾವಾಗ ಪುನರ್ ವಿಂಗಡಣೆ ಮಾಡಲಾಗುವುದು, ಪುನರ್ ವಿಂಗಡಣೆ ಮಾಡಲು ಕಾರಣವೇನು;

ಇ) ಈ ಕ್ಷೇತ್ರ ವಿಂಗಡಣೆಯನ್ನು ಯಾವ ಮಾನದಂಡವನ್ನು ಅನುಸರಿಸಿ ಮಾಡಲಾಗುತ್ತದೆ;

ಈ) 2011ರ ಜನಗಣತಿಯನ್ನು ಪರಿಗಣಿಸಲಾಗುವುದೇ; ಇದರಿಂದ ಆಗುವಂತಹ ಅನುಕೂಲತೆಗಳೇನು; ಈ ಪ್ರಕ್ರಿಯೆ ಪೂರ್ಣಗೊಳ್ಳಲು ಸರ್ಕಾರ ತೆಗೆದುಕೊಳ್ಳಲಿರುವ ಸಮಯ ಎಷ್ಟು;

ಉ) ಕ್ಷೇತ್ರ ಪುನರ್ ವಿಂಗಡಣೆಗಾಗಿ ರಾಜ್ಯ ಮಟ್ಟದಲ್ಲಿ ತಜ್ಞರ ಸಮಿತಿಯನ್ನು ರಚಿಸಲಾಗಿದೆಯೇ; ಅದೇ ರೀತಿ ಜಿಲ್ಲಾ ಮಟ್ಟದಲ್ಲೂ ಸಲಹೆ ಅಭಿಪ್ರಾಯಗಳನ್ನು ಪಡೆಯಲಾಗುವುದೇ, ಈ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ಪಾತ್ರವೇನು, ಕ್ಷೇತ್ರ ವಿಂಗಡಣೆಯಿಂದ ಹೊಸ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತಿ ಕ್ಷೇತ್ರಗಳು ಹೆಚ್ಚುವರಿಯಾಗುವ ಅಥವಾ ಬದಲಾಗುವ ಸಾಧ್ಯತೆಗಳಿವೆಯೇ? (ವಿವರ ಒದಗಿಸುವುದು)

ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಸಂವಿಧಾನದ 73ನೇ ತಿದ್ದುಪಡಿಗನುಗುಣವಾಗಿ, 1993ರ ಏಪ್ರಿಲ್ ನಿಂದ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಜಾರಿಯಲ್ಲಿರುತ್ತದೆ.

ಸಂವಿಧಾನದ 73ನೇ ತಿದ್ದುಪಡಿಗನುಗುಣವಾಗಿ ಸಂವಿಧಾನಕ್ಕೆ ಭಾಗ 9ನ್ನು ಸೇರಿಸಲಾಗಿದ್ದು, ಅದರಲ್ಲಿನ 243 (ಎ–ಎಚ್.ರವರೆಗಿನ) ಪರಿಚ್ಛೇದದಡಿ ನಿರೂಪಿಸಿರುವ ನಿರ್ದೇಶನಗಳನ್ವಯ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರನ್ನು ರಚಿಸಲಾಗಿದೆ.

ಆ) ಕರ್ನಾಟಕ ಪಂ.ರಾಜ್ ಅಧಿನಿಯಮ 1993ರ ಪ್ರಕರಣ 4ರನ್ವಯ ಪಂಚಾಯತ್ ಪ್ರದೇಶದ ಘೋಷಣೆ ಮತ್ತು ಗ್ರಾಮ ಪಂಚಾಯತಿಗಳ ಸ್ಥಾಪನೆಗೆ ಜಿಲ್ಲಾಧಿಕಾರಿಗಳೇ ಸಕ್ಷಮ ಪ್ರಾಧಿಕಾರವಾಗಿರುತ್ತಾರೆ. ಆದರೆ, ಸಾರ್ವಜನಿಕರು ಹಾಗೂ ಜನ ಪ್ರತಿನಿಧಿಗಳು ಪ್ರಸ್ತುತ ಇರುವ ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪುನರ್ ವಿಂಗಡಣೆ, ಕೇಂದ್ರ ಬದಲಾವಣೆ ಹಾಗೂ ಹೊಸ ಗ್ರಾಮ ಪಂಚಾಯತಿಗಳಿಗೆ ರಚನೆ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದ ಕಾರಣ, ಇವುಗಳನ್ನು ಆಡಳಿತಾತ್ಮಕ ಹಾಗೂ ಅಭಿವೃದ್ಧಿ ನಿಟ್ಟಿನಲ್ಲಿ ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಮಾಜಿ ಶಾಸಕರಾದ ಶ್ರೀ ಎಸ್.ಜಿ.ನಂಜಯ್ಯನಮಠ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ.

ಸಮಿತಿಯು ಮರು ವಿಂಗಡಣೆ ಮಾಡುವ ವಿಚಾರದಲ್ಲಿ ಸಲ್ಲಿಸುವ ವರದಿಯನ್ನು ಸರ್ಕಾರವು ಪರಿಶೀಲಿಸಿ ತದನಂತರ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಅಭಿಪ್ರಾಯಗಳನ್ನು ಪಡೆದು ಸದರಿ ಪ್ರಕರಣದ ನಿರೂಪಣೆಯಂತೆ ಕ್ರಮ ಕೈಗೊಂಡು ನಂತರ ಪುನರ್ ವಿಂಗಡಣೆ ಮಾಡಲಾಗುವುದು.

ಇ) ಕರ್ನಾಟಕ ಪಂ.ರಾಜ್ ಅಧಿನಿಯಮ 1993ರ ಪ್ರಕರಣ 4ರಡಿಯ ನಿರೂಪಣೆಯಂತೆ ವರದಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಈ) ಹೌದು. ಜನಸಂಖ್ಯೆಯನ್ನಾಧರಿಸಿ ಗ್ರಾಮ ಪಂಚಾಯತಿಗಳ ರಚನೆಯನ್ನು ಮಾಡಲು ಅನುಕೂಲವಾಗುವುದು.

ಸಮಿತಿಯು ಆಗಸ್ಟ್ 2014ರ ಅಂತ್ಯದೊಳಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಉ) ಮಾಜಿ ಶಾಸಕರಾದ ಶ್ರೀ ಎಸ್.ಜಿ.ನಂಜಯ್ಯನಮಠ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಜಿಲ್ಲಾ ಮಟ್ಟದಲ್ಲಿ ಸಲಹೆ ಹಾಗೂ ಅಭಿಪ್ರಾಯಗಳನ್ನು ಪಡೆಯುತ್ತಿದೆ. ಈ ಪ್ರಕ್ರಿಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ನೀಡಬಹುದಾಗಿದೆ. ಸಮಿತಿಯ ವರದಿಯನ್ನಾಧರಿಸಿ ಗ್ರಾಮ ಪಂಚಾಯಿತಿ ಕ್ಷೇತ್ರಗಳನ್ನು ಪುನರ್ ವಿಂಗಡಣೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಎಂ.ಎಸ್.ಐ.ಎಲ್. ಸನ್ನದುಗಳು

1416(1560), ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್(ಯಲ್ಲಾಪುರ)

ಅ) ರಾಜ್ಯದಲ್ಲಿ ಈಗಾಗಲೇ ಪೂರ್ವಾನುಮತಿ ನೀಡಿರುವ ಮತ್ತು ಹಾಲಿ ಪ್ರಾರಂಭಗೊಂಡಿರುವ ಎಂ.ಎಸ್.ಐ.ಎಲ್. ಸನ್ನದುಗಳ ಸಂಖ್ಯೆ ಎಷ್ಟು; ಇದನ್ನು ಪ್ರಾರಂಭಿಸಲು ಇರಬೇಕಾಗಿರುವ ನಿರ್ದಿಷ್ಟ ಮಾನದಂಡಗಳೇನು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಂ.ಎಸ್.ಐ.ಎಲ್. ಸನ್ನದುಗಳನ್ನು ಎಲ್ಲೆಲ್ಲಿ ಪ್ರಾರಂಭಿಸಲು ಪೂರ್ವಾನುಮತಿ ನೀಡಲಾಗಿದೆ; ಇನ್ನು ಎಷ್ಟು ಕಡೇ ಪ್ರಾರಂಭಿಸಲಾಗದೇ ಬಾಕಿ ಉಳಿದಿದೆ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)